ಸರ್ಕಾರಿ ಹಾಗೂ ಖಾಸಗಿ ಕಿರಿಯ ಮಹಾವಿದ್ಯಾಲಯಗಳನ್ನು ಹೆಚ್ಚಿಸುವ ಬಗ್ಗೆ

೪೮೨ (೧೩೯೭) ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೯–೯೦ನೇ ಸಾಲಿನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಉತ್ತೀರ್ಣವಾದ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಕಿರಿಯ ಕಾಲೇಜುಗಳಾಲೀ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ೨,೬೧,೨೭೨.

ಆ) ಬಂದಿದೆ.

ಇ) ಅವಶ್ಯಕತೆಯಿದ್ದಲ್ಲಿ ಹೆಚ್ಚುವರಿ ದಾಖಲಾತಿಗೆ ಅನುಮತಿ ಕೊಡಲಾಗಿದೆ. ಇನ್ನೂ ಅವಶ್ಯಕತೆ ಇದ್ದಲ್ಲಿ ಹೆಚ್ಚಿನ ವರ್ಗಗಳನ್ನು ತೆರೆಯಲು ಅನುಮತಿ ನೀಡಲಾಗುತ್ತಿದೆ. ಮತ್ತು ಅವಶ್ಯಕತೆ ಹೆಚ್ಚಾದ್ದಲ್ಲಿ ಹೊಸ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ಶ್ರೀ ಚೌಡರೆಡ್ಡಿ.—ಮಾನ್ಯ ಅಧ್ಯಕ್ಷರೇ, ದಿನಾಂಕ ೮–೭–೯೦ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಮಿಷನ್‌ರ್‌ರವರು ಗೌರ್ನಮೆಂಟ್ ಕಾಲೇಜುಗಳಲ್ಲಿ ಎಲ್ಲಿ ಪಿ.ಯು.ಸಿ. ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳಬಹುದೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಮ್ಮ ಚಿಂತಾಮಣಿಯಲ್ಲಿ ಫರ್ಸ್ಟ್‌ಗ್ರೇಡ್ ಕಾಲೇಜು ಇದೆ. ಅದಕ್ಕೆ ಪಿಯುಸಿ ಆಟ್ಸಾಚ್ ಆಗಿದೆ. ಅಲ್ಲಿ ೪೫೦ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಆಗಿಲ್ಲ. ಅವರೆಲ್ಲರೂ ಅಡ್ಮಿಷನ್ ಮಾಡಿಕೊಳ್ಳಬೇಕೆಂದು ಧರಣಿ ಮಾಡುತ್ತಿದ್ದಾರೆ. ಮಾನ್ಯಮಂತ್ರಿಗಳು ಈ ಬಗ್ಗೆ ಏನು ಮಾಡುತ್ತಾರೆಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಅಲ್ಲಿ ಕಟ್ಟಡಗಳ ಅಭಾವವಿದೆ. ಅಲ್ಲಿ ಎಷ್ಟು ತೆಗೆದುಕೊಳ್ಳಬೇಕೋ ಅಷ್ಟನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೊಡಲಾಗಿದೆ. ಈ ವರ್ಷ ಹೆಚ್ಚು ಅನುಕೂಲ ಮಾಡಬೇಕು ನಾನು ಒಪ್ಪಿಕೊಳ್ಳುತ್ತೇನೆ. ಈ ವರ್ಷ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪಾಸಾದವರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಈ ತೊಂದರೆ ಬಂದಿದೆ, ಸರ್ಕಾರ ಹೆಚ್ಚು ವಿದ್ಯಾರ್ಥಿಗಳನ್ನು ಪಿ.ಯು.ಸಿ.ಗೆ ಸೇರಿಸಿಕೊಳ್ಳುವುದಕ್ಕೆ ಅವಶ್ಯಕತೆ ಬಿದ್ದಲ್ಲಿ ಒದೊಂದು ಸೆಕ್ಷನ್ ಹೆಚ್ಚು ಮಾಡುವುದಕೆ ಅನುಮತಿಯನ್ನು ಕೊಟ್ಟಾಗಿದೆ. ಮಾನ್ಯ ಸದಸ್ಯರು ಏನು ವಿಷಯ ಪ್ರಸ್ತಾಪಮಾಡಿ, ೪೦೦–೫೦೦ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಸಿಕ್ಕಿಲ್ಲ ಅಂತ ಹೇಳುತ್ತಿದ್ದಾರೆ, ಈಗಾಗಲೇ ಶಾಲಾ ಕಟ್ಟಡ ಏನಿದೆ ಹೈಸ್ಕೂಲ್ ಕಟ್ಟಡ ಅಲ್ಲಿ ಮಾಡಬಹುದು ಎಂದು ಹೇಳಿ ನಾನು ಅಧಿಕಾರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸದಸ್ಯರು ಕೂಡ ಅಧಿಕಾರಿಗಳೊಡನೆ ಪ್ರಸ್ತಾಪ ಮಾಡಿದ್ದರು ಎಂಬುದು ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಅಲ್ಲಿ ೨೩ ಜನ ಉಪಾಧ್ಯಾಯರ ಕೊರತೆ ಇದೆ. ವಿವರ ಬೇಕಾದರೆ ಕೊಡುತ್ತೇನೆ. ೨೩ ಜನ ಉಪಾಧ್ಯಾಯರನ್ನು ತತ್‌ಕ್ಷಣದಲ್ಲಿ ಬೇರೆ ಕಡೆಯಿಂದ ವರ್ಗಮಾಡುವು ದಾಗಲೀ ಅಥವಾ ಯಾವುದೇ ವಿಧಾನವನ್ನು ಅನುಸರಿಸಿ ಅಲ್ಲಿಗೆ ವರ್ಗಮಾಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ? ಮತ್ತು ಕಟ್ಟಡದ ಬಗ್ಗೆ ತಾವು ಏನು ಹೇಳುತ್ತಿದ್ದಿರಿ ಅಂದರೆ, ಸುಮಾರು ತಮ್ಮ ಲೆಕ್ಕದ ಪ್ರಕಾರ... ..

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಸದಸ್ಯರ ಲೆಕ್ಕದ ಪ್ರಕಾರ.

ಶ್ರೀ ಸಿ. ಬೈರೇಗೌಡ.—ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ನಾನು ಸಹ ಆಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ೬೦೦ ಜನ ವಿದ್ಯಾರ್ಥಿಗಳಿಗೆ ಆಲ್ಲಿ ಪ್ರವೇಶಾವಕಾಶ ಇಲ್ಲ. ಅದು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಕಾಲೇಜು. ಆಲ್ಲಿ ಪ್ರವೇಶ ಪಡೆಯಬೇಕಾಗಿರುವವರೆಲ್ಲರೂ ಹಳ್ಳಿಗಳಿಂದ ಬರತಕ್ಕಂಥವರು ಆಗಿದ್ದಾರೆ ಈ ದೃಷ್ಟಿಯಿಂದ ತಾವು ಈಗ ಕಟ್ಟಡ ಬಗ್ಗೆ ಏನು ಹೇಳುತ್ತಿದ್ದೀರಿ. ಅದನ್ನು ಒಂದೇ ದಿವಸದಲ್ಲಿ ಕಟ್ಟಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಬೌಡಿಗೆಗಾದರೂ ಒಂದು ಕಟ್ಟಡ ಪಡೆದು ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಎಲ್ಲ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ದೊರಕಿಸಿಕೊಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಸದಸ್ಯರು ಮತ್ತೆ ೨೦೦ ವಿದ್ಯಾರ್ಥಿಗಳನ್ನು ಜಾಸ್ತಿ ಮಾಡಿದರು. ಮೊದಲು ೪೦೦ ಇದ್ದುದು ಈಗ ೨೦೦ ಜಾಸ್ತಿ ಮಾಡಿದ್ದಾರೆ. ಆದಕ್ಕೇ ನಾನು ಹೇಳಿದ್ದು ಇದನ್ನು ಪರಿಶೀಲಿಸಿ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಾಗೆಯೇ ಉಪಾಧ್ಯಾಯರ ಬಗ್ಗೆ ಹೇಳುತ್ತಾರೆ. ೨೩ ಜನ ಎಂದಿದ್ದಾರೆ ನಾನು ನೋಡುತ್ತೇನೆ. ಆಷ್ಟು ಇದ್ದ ಹಾಗೆ ಕಾಣುವುದಿಲ್ಲ. ಕೆಲವು ಕಡೆ ವರ್ಗ ಮಾಡಿದ್ದಾರೆ ಆದರೆ ಕೆಲವರು ಹೋಗುತ್ತಿಲ್ಲ. ಹೋಗಿಲ್ಲ, ಇದಕ್ಕೆ ಏನು ಮಾಡಬೇಕು ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮೊದಲೇ ನಮ್ಮಲ್ಲಿ ಇರತಕ್ಕಂಥ ಉಪಾನ್ಯಾಸಕರು, ರೀಡರ್ಸ್, ಪ್ರೊಫೆಸರ್ಸ್ ಲೆಚ್ಚರರ್ಸ್, ಇವರ ಸಂಖ್ಯೆ ಕಡಿಮೆ ಹೀಗೆ ತೊಂದರೆ ಇದ್ದಾಗ ವರ್ಗ ಮಾಡಿದರೆ, ಹೋಗದೇ ಇರತಕ್ಕಂಥವರು ಜಾಸ್ತಿ ಇದ್ದಾರೆ. ಇವೆಲ್ಲ ವನ್ನೂ ಗಮನದಲ್ಲಿಟ್ಟುಕೊಂಡು ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ವಿಚಾರ ಮಾಡುತ್ತದೆ.

ಶ್ರೀ ಚೌಡರೆಡ್ಡಿ.—ನನ್ನ ೫ನೇ ಪ್ರಶ್ನೆಗೆ ಉತ್ತರವಾಗಿ ಅವಶ್ಯಕತೆ ಹೆಚ್ಚಾದಲ್ಲಿ ಹೊಸ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. ಎಂದು ಹೇಳಿದ್ದೀರಿ. ಎಷ್ಟು ಪದವಿಪೂರ್ವ ಕಾಲೇಜುಗಳಿಗೆ ಬೇಡಿಕೆ ಬಂದಿದೆ ? ಚಿಂತಾಮಣಿಯಲ್ಲಿ ಏನಾದರೂ ಈ ರೀತಿ ಬೇಡಿಕೆ ಬಂದಿದೆಯೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಇದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಗೋಪಿನಾಥ ಆರ್ ಸಾಂದ್ರ.—ಹುಬ್ಬಳಿಯಲ್ಲಿ ಕೂಡ ವಿದ್ಯಾರ್ಥಿಗಳಿಗೆ ಅಡ್ಮಿಶನ್ ಸಿಗುತ್ತಿಲ್ಲ. ನೂರಕ್ಕೆ ೫೦ ರಷ್ಟು ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆಯಾದವರು ಅಡ್ಮಿಶನ್‌ಗಾಗಿ ಓಡಾಡುತ್ತಿದ್ದಾರೆ. ಈ ದೃಷ್ಟಿಯಿಂದ ಸನ್ಮಾನ್ಯ ಮಂತ್ರಿಗಳು ಈಗಿರುವ ಕಾಲೇಜುಗಳಲ್ಲಿ ಹೆಚ್ಚಿಗೆ ವರ್ಗಗಳನ್ನು ತೆರೆಯಲು ವ್ಯವಸ್ಥೆ ಮಾಡುತ್ತಾರೆಯೇ ಅಥವಾ ಬೇರೆಯಾರಾದರು ಕಾಲೇಜುಗಳನ್ನು ತೆಗೆಯುತ್ತೀವೆ ಎಂದು ಮುಂದೆ ಬಂದರೆ ಅವರಿಗೆ ಅವಕಾಶ ಮಾಡಿಕೊಡತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಹೆಚ್ಚು ಮಕ್ಕಳನ್ನು ಸೇರಿಸಿಕೊಳ್ಳುವುದಕ್ಕೆ ಏನು ಮಾಡುತ್ತಿದ್ದೇವೆ ಎಂದು ಈಗಾಗಲೇ ಪ್ರಸ್ತಾಪಮಾಡಿದ್ದೇನೆ.

ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ರೋಸ್ಟರ್ ಪದ್ಧತಿ ಅಳವಡಿಸುವ ಬಗ್ಗೆ

೪೭೩. (೧೬೮೫) ಶ್ರೀ ಮನೋಹರ ಐನಾಪುರ (ಬಳ್ಳಾರಿ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ರೋಸ್ಟರ್ ಪದ್ಧತಿ ಅಳವಡಿಸಿರುವುದು ವಾಸ್ತವವೇ?

ಆ) ಹಾಗಿದಲ್ಲಿ, ಅದು ಅಪರ ಜಿಲ್ಲೆಯಿಂದ ವಂಚಿತರನ್ನಾಗಿ ಮಾಡುವುದಿಲ್ಲವೇ ?

ಇ) ಮೇಲೆ ಹೇಳಿದ ಶಿಕ್ಷಕರಿಗೂ ರೋಸ್ಟರ್ ಪದ್ಧತಿ ಜಾರಿಗೆ ಬರುವಂತೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?